# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.5
P.W. 5

ದಿನಾಂಕಃ 18-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ದೇವರಾಜ್ |
| ತಂದೆಯ ಹೆಸರು | ಃ ನರಸಿಂಹಯ್ಯ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಖಾಸಗಿ ಕೆಲಸ |
| ವಾಸ | ಃ ದೊಡ್ಡ ಸಾರಂಗಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಶವಪಂಚನಾಮೆಯಾಗಿದ್ದು ಅದನ್ನು ನಿಪಿ-18 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.

2) ರಮೇಶ್ , ಸಿದ್ದರಾಜ್, ಶಿವರಾಜ್ ರವರು ಆ ಸಮಯದಲ್ಲಿ ನನ್ನ ಜೊತೆ ಇದ್ದರು. ತುಮಕೂರು ಜಿಲ್ಲಾ ಆಸ್ಪತ್ರೆಯಲ್ಲಿ ಈಗ 4 ವರ್ಷದ ಹಿಂದೆ ಪೊಲೀಸರ ಕೋರಿಕೆಯ ಮೇರೆಗೆ ನಿಪಿ-18 ಕ್ಕೆ ಸಹಿ ಮಾಡಿರುತ್ತೇನೆ. ತುಮಕೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ತೆಗೆದಂತಹ ಪೋಟೋವನ್ನು ಸಾಕ್ಷಿದಾರರು

ನೋಡಿ ಗುರುತಿಸುತ್ತಾರೆ. ಸದರಿ ಫೋಟೋವನ್ನು ನಿಪಿ-19 ಎಂದು ಗುರುತಿಸಲಾಯಿತು. ಯಾವ ವ್ಯಕ್ತಿಯ ಶವವಾಗಿತ್ತು ಎಂದು ನನಗೆ ಗೊತ್ತಿಲ್ಲ. ಶವದ ಮೈಯ ಮೇಲೆ ಗಾಯಗಳುಇರುವ ಬಗ್ಗೆ ಹಾಗೂ ಶವದ ಸ್ಥಿತಿಗತಿಯ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-

3) ದಿ 24-08-2020 ರಂದು ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ಇದ್ದರು, ಡಾಕ್ಟರ್ ಇದ್ದರೋ ಇಲ್ಲವೋ ನೆನಪಿಲ್ಲ. ಶವವು ದುರ್ವಾಸನೆಯಿಂದ ಕೂಡಿತ್ತು. ಮೃತ ವ್ಯಕ್ತಿಯ ಹೆಸರು ಅಂಜಲಿ ಎಂದಲು ಆಗಿತ್ತು ಅದನ್ನು ಸಹ ಶವಪಂಚನಾಮೆಯ ಕಾಲದಲ್ಲಿ

ಬರೆದುಕೊಂಡಿರುತ್ತಾರೆ ಅಂದರೆ ಸರಿ. ಶವಪಂಚನಾಮೆಯ ಕಾಲಂ ನಂ.7 ರಲ್ಲಿ ಮೃತಳ ದೇಹವು ತಲೆಯಿಂದ ಸೊಂಟದವರಿಗೆ ಕೊಳೆತು ಚರ್ಮ ಕಪ್ಪಾಗಿರುತ್ತದೆ ಎಂದು ಬರೆದುಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮೇಲ್ನೋಟಕ್ಕೆ ಯಾವುದೇ ಗಾಯಕಂಡು ಬರುವುದಿಲ್ಲವೆಂದು ಬರೆದುಕೊಂಡಿರುತ್ತಾರೆ ಅಂದರೆ ಗೊತ್ತಿಲ್ಲ . ಆ ಸಮಯದಲ್ಲಿ ಮೃತಳ ದೇಹದ ಮೇಲೆ ಇದ್ದ ಬಿಳಿ ಮತ್ತು ಕೆಂಪು ಮಿಶ್ರಿತ ಹೂವಿನ ಡಿಸೈನ್ ನ ನೈಟಿ, ಕೆಂಪು ಬಣ್ಣದ ಒಳಲಂಗ , ಕ್ರಿಮ್ ಬಣ್ಣದ ಬ್ರಾ ಜಪ್ತುಪಡಿಸಿಕೂಂಡಿರುತ್ತಾರೆ ಅಂದರೆ ಸರಿ . ಮೃತಳ ಎರಡು ಕಾಲುಗಳನ್ನು ಸೀರೆಯಿಂದ ಕಟ್ಟಿರುತ್ತದೆ ಎಂದು ಬರೆದುಕೊಂಡರು ಅಂದರೆ ನನಗೆ ಗೊತ್ತಿಲ್ಲ.

4) ಸಾಕ್ಷಿಯು ಎರಡೂ ಬಿಳಿ ಬಟ್ಟೆ ಗಳಲ್ಲಿ ಚೀಲದಲ್ಲಿ ಸೀಲ್ ಮಾಡಲಾದ ವಸ್ತುಗಳನ್ನು ತೋರಿಸಲು ಮಾನ್ಯ ಅಭಿಯೋಜಕರು ಕೋರಿದ್ದು , ತೆರೆದ ನ್ಯಾಯಾಲಯದಲ್ಲಿ ಸದರಿ ವಸ್ತುಗಳನ್ನು ತೆರೆದು ಸಾಕ್ಷಿಗೆ ತೋರಿಸಲು ನ್ಯಾಯಾಲಯದ ಅನುಮತಿಯನ್ನು ಕೋರಿದರು, ಆರೋಪಿಗಳು ಹಾಗೂ ಆರೋಪಿ ಪರ ವಕೀಲರು ಮತ್ತು ಸಾಕ್ಷಿಯ ಸಮಕ್ಷಮ ಸದರಿ ವಸ್ತುಗಳನ್ನು ತೆರೆಯಲು ನ್ಯಾಯಾಲಯವು ಅನುಮತಿಸಲಾಯಿತು.

5) ಸದರಿ 2 ಸೀಲ್ ಮಾಡಿದ ಬಟ್ಟೆಗಳಲ್ಲಿ ಇರುವ ವಸ್ತುಗಳನ್ನು ಗುರುತಿಸಿರುವುದಿಲ್ಲ. ಸದರಿ ವಸ್ತುಗಳ ಒಳಲಂಗ ಮತ್ತು ಬ್ರಾ ಆಗಿರುತ್ತದೆ. ಮೃತಳ ಶವದ ಎರಡೂ ಕಾಲುಗಳನ್ನು ಸೀರೆಯಿಂದ ಕಟ್ಟಿದ್ದು ಕಾಲಿನ ಮೇಲೆ ಮತ್ತು ದೇಹದ

ಇತರೆ ಭಾಗಗಳ ಮೇಲೆ ಖಾರದ ಪುಡಿ ಚೆಲ್ಲಾಡಿರುತ್ತದೆ ಎಂದು ನನಗೆ ಗೊತ್ತಿಲ್ಲ . ಸದರಿ ಸೀರೆಯನ್ನು ಈಗಾಗಲೇ ಎಂಓ-6 ಎಂದು ಗುರುತಿಸಲಾಗಿದೆ. ಪಂಚನಾಮೆಯ ವಿಚಾರವನ್ನು ಪೊಲೀಸರನ್ನು ಕೇಳಿ ತಿಳಿದುಕೊಂಡಿರುತ್ತೇನೆ . ನಾನು ಸಹ ಓದಿ ನೋಡಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ .

<u>ಪಾಟೀ ಸವಾಲುಃ **1** ಮತ್ತು **4** ನೇ ಆರೋಪಿಗಳ ಪರ ಶ್ರೀ ಬಿ ಕೆ ಪಿ ವಕೀಲರಿಂದಃ</u>

6) ನನ್ನ ಸ್ನೇಹಿತ ಶಿವರಾಜು ದೂರವಾಣಿ ಕರೆ ಮಾಡಿ ಆಸ್ಪತ್ರೆಗೆ ಬಾ ಎಂದು ಕರೆದ ಕಾರಣಕ್ಕಾಗಿ ನಾನು ಆಸ್ಪತ್ರೆಗೆ ಹೋದೆನು. ಪೊಲೀಸರು ನನಗೆ ಪಂಚನಾಮೆಗೆ ಭಾಗವಹಿಸಲು ಯಾವುದೇ ನೋಟೀಸ್ ಕೊಟ್ಟಿಲ್ಲ. ನಿಪಿ-18 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ನಾನು ಪೋಟೋವನ್ನು ತೆಗೆಸಿಕೊಂಡಿರುತ್ತೇನೆ ಅಂದರೆ ನಿಜ. ಶವದ ಮೇಲೆ ಬಟ್ಟೆ ಮುಚ್ಚಿದ್ದರಿಂದ ಸದರಿ ಶವ ಯಾರದು ಎಂದು ನನಗೆ ಗೊತ್ತಿಲ್ಲ. ಮೃತಳು ಯಾವ ಕಾರಣಕ್ಕಾಗಿ ಮೃತಪಟ್ಟಿದ್ದಳು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವಮುದ್ದೆ ಮಾಲುಗಳನ್ನು ಇದೇ ಮೊದಲ ಭಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿದ್ದೇನೆ ಅಂದರೆ ಸರಿ . ನ್ಯಾಯಾಲಯದ ಮುಂದೆ ಇರುವ ವಸ್ತುಗಳನ್ನು ಪೊಲೀಸರು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುವುದಿಲ್ಲ.

( 2,3,5 ನೇ ಆರೋಪಿಗಳ ಪರ ವಕೀಲರ ವಿನಂತಿಯ ಮೇರೆಗೆ 1 ಮತ್ತು 4 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲಾಯಿತು.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು**